# ಘಟನೆಯೆ, ಅಘಟನೆಯೆ?

ಬಂಗಾಳಿ ಮೂಲ : **ಗಜೇಂದ್ರಕುಮಾರ ಮಿತ್ರ**

ಅನುವಾದ : **ಸ್ವಾಮಿ ಜ್ಞಾನಯೋಗಾನಂದ**

ಒಂದೆರಡು ಮಿರಾಕಲ್ (ಅಮಾನುಷ ಘಟನೆ)ಗಳನ್ನು ಈ ಕಣ್ಣುಗಳಿಂದ ನೋಡಿಲ್ಲ ಎಂದೇನಿಲ್ಲ – ಅಂದರೆ, ನನ್ನ ಜೀವನದಲ್ಲೇ ಅಂಥ ಘಟನೆಗಳು ನಡೆದಿವೆ, ಅವನ್ನು ಮಿರಾಕಲ್ ಎಂದು ಹೇಳುವುದೇ ಒಳ್ಳೆಯದು. ಆ ಕಥೆಗಳನ್ನೆಲ್ಲ ನಾನು ಈ ಹಿಂದೆ ಬರೆದಿದ್ದೇನೆ. ದುರ್ಗಾಪೂಜೆಯ ಸಂದರ್ಭದಲ್ಲಿ ಹೊರಬಂದ ವಿಶೇಷ ಸಂಚಿಕೆಯಲ್ಲಿ ‘ಯುಗಾಂತರೇ’, ‘ಕಾಕತಾಳೀಯ?’ ಎಂಬ ಶೀರ್ಷಿಕೆಯ ಲೇಖನಗಳಲ್ಲಿ ಅವು ಪ್ರಕಟವಾಗಿವೆ. ಇನ್ನೂ ಕೆಲವು ಅಂಥ ಘಟನೆಗಳನ್ನು ಕೇಳಿದ್ದೇನೆ.

ಒಬ್ಬರು ಸಾಧುಗಳಿಂದ[೧] ಕೇಳಿದ್ದೇನೆ, ಒಬ್ಬ ತರಕಾರಿ–ಸೊಪ್ಪು ಮಾರುವವನು ವರ್ಧಮಾನ ಸ್ಟೇಶನ್ನಿನಲ್ಲಿ ಕುಳಿತಿದ್ದ; ಲೋಕಲ್ ಟ್ರೇನ್‌ನಲ್ಲಿ ಸಾಮಾನುಗಳನ್ನು ತೆಗೆದುಕೊಂಡು ಕಲ್ಕತ್ತೆಗೆ ಹೋಗಬೇಕಿತ್ತು. ಸಾಮಾನು ಎಂದರೆ ಹೆಚ್ಚೇನೂ ಇಲ್ಲ, ಸ್ವಲ್ಪ ಸೊಪ್ಪು ಮಾತ್ರವೇ ಇತ್ತು. ಅದರ ನಡುವೆ ಒಳ್ಳೆಯ ಚಡುಯಿ ಸೊಪ್ಪು ಅಥವಾ ಚಾಪಾನಟೇ ಸೊಪ್ಪು (ಇವೆರಡೂ ಅಡುಗೆಗೆ ಬಳಸುವ ಸೊಪ್ಪುಗಳು) ಪ್ರಧಾನವಾಗಿತ್ತು, ಪಕ್ಕದಲ್ಲಿ ವೃದ್ಧ ಮಹಿಳೆಯಂತೆ ಕಾಣುವ ಒಬ್ಬಾಕೆ ಕುಳಿತಿದ್ದಳು. ಹಳ್ಳಿಯ ಭಾಗದ ಕುಗ್ಗಿರುವ, ಸಂಕೋಚ ಸ್ವಭಾವದ ವಯಸ್ಸಾದ ಒಬ್ಬಾಕೆ ಮಹಿಳೆ ಅವಳು. ಆಕೆ ಪದೇ ಪದೇ ಆ ಸೊಪ್ಪುಗಳ ಮೇಲೆ ಕೈಯಾಡಿಸುತ್ತಾ ನೋಡತೊಡಗಿದಳು – ಅದನ್ನು ಸ್ಪರ್ಶಿಸುವ ಮೂಲಕವೇ ಅದರ ರುಚಿಯನ್ನು ಅನುಭವಿಸುವಂತೆ. ಆಕೆ ಹೇಳತೊಡಗಿದಳು, ‘‘ಅಬ್ಬಾ, ಬಹಳ ದಿನಗಳಿಂದ ಇಂಥ ನಳನಳಿಸುವ ಸೊಪ್ಪು ನೋಡಲೇ ಇಲ್ಲ ಮಗೂ, ಇನ್ನೇನು ಹೇಳಲಿ!’’

ವೃದ್ಧೆಯ ರೀತಿನೀತಿಯನ್ನು ಕಂಡು ಸೊಪ್ಪು ಮಾರುವವನು ಮಾರುಹೋದ. ಹೇಳಿದ, ‘‘ಹಾಗಿದ್ದರೆ ತೆಗೆದುಕೋ ಅಜ್ಜಿ, ಎರಡು ಕಂತೆ, ಮೂರು ಕಂತೆ ಎಷ್ಟು ಬೇಕೋ ತೆಗೆದುಕೋ. ಬೇಕಾದಷ್ಟು ತೆಗೆದುಕೋ. ದುಡ್ಡು ಕೊಡಬೇಕಾಗಿಲ್ಲ.’’

ಆ ಮಹಿಳೆ ತಲೆಯಲ್ಲಾಡಿಸುತ್ತಾ ಹೇಳಿದಳು: ‘‘ಇಲ್ಲ ಮಗೂ, ಈಗ ನಾನು ತೆಗೆದುಕೊಳ್ಳಲಾರೆ. ಈಗ ನಾನು ಮನೆಗೆ ಹೋಗುತ್ತಿಲ್ಲ.’’

ಸ್ವಲ್ಪ ಹೊತ್ತಿನ ನಂತರ ಆಕೆ ಹೇಳಿದಳು: ‘‘ನೀನು ಎಲ್ಲಿಗೆ ಹೋಗುತ್ತೀಯಾ ಅಂತ ಹೇಳಿದೆ? ಸೊಪ್ಪು ಮಾರುವುದಕ್ಕೆ ಶ್ಯಾಮಬಜಾರಿಗೆ ಹೋಗುತ್ತೀಯಲ್ಲವೆ? ಹಾಗಿದ್ದರೆ ಮಗೂ, ನೀನು ದಯಮಾಡಿ ಒಂದು ದಿನ ನನ್ನ ಮನೆಗೆ ಎರಡು ಕಂತೆಕೊಟ್ಟು ಬಾ. ಹಾಗಿದ್ದರೆ ನಾನು ಅಂದು ಬದುಕಿದಂತೆ —’’

‘‘ನನಗೆ ದಾರಿ ಹೇಗೆ ಗೊತ್ತಾದೀತು?’’

‘‘ಅದೇನೂ ಇಲ್ಲ ಬಿಡು. ಶ್ಯಾಮಬಜಾರಿನಲ್ಲಿ ಪೇಟೆಯಿಂದ ಹೊರಟು ಸ್ವಲ್ಪ ಉತ್ತರ ದಿಕ್ಕಿಗೆ ಹೋಗು – ಬಾಗ್‌ಬಜಾರ್ ಇದೆ. ಅಲ್ಲಿಗೆ ಹೋಗಿ ತಾಯಿಯವರ ಮನೆ (‘ಉದ್ಬೋಧನ’)ಎಲ್ಲಿ ಅಂತ ಕೇಳಿದರೆ, ಯಾರಾದರೂ ದಾರಿ ತೋರಿಸಿಕೊಟ್ಟಾರು —’’

ಅದೇ ರೀತಿ ಆ ಮನುಷ್ಯ ಅಲ್ಲಿಗೆ ಹೋಗಿದ್ದ. ಪೇಟೆಗೆ ಹೋಗುವ ಮೊದಲೇ ಅಲ್ಲಿಗೆ ಹೋದ. ಚಾಪನಾಟೇ ಸೊಪ್ಪನ್ನು ಬೇರೆ ಮಾಡಿ, ಒಂದು ಬಟ್ಟೆಯನ್ನು ಹರಿದು, ಅದರಲ್ಲಿ ಕಟ್ಟಿ ತೆಗೆದುಕೊಂಡು ಹೋದ. ಮನೆಯನ್ನು ಪತ್ತೆ ಹಚ್ಚುವುದು ಕಷ್ಟವಾಗಲಿಲ್ಲ. ಆದರೆ ಕಷ್ಟವಾದದ್ದೆಂದರೆ– ಅಲ್ಲಿನ ಜನರಿಗೆ ಹೀಗೆ ಹೇಳಿದಾಗ: ‘‘ಈ ವಿಳಾಸದ ಮನೆಯಲ್ಲಿ ಒಬ್ಬಾಕೆ ವೃದ್ಧ ಮಹಿಳೆ ವಾಸವಾಗಿದ್ದಾಳೆ; ಇಲ್ಲಿಗೆ ಒಂದಿಷ್ಟು ಸೊಪ್ಪು ಕೊಟ್ಟು ಹೋಗಲು ಆಕೆ ಹೇಳಿದ್ದಾಳೆ – ಅದಕ್ಕಾಗಿ ಅದನ್ನು ನಾನು ತಂದೆ.’’

ನಿಜವಾಗಿಯೂ ಅದೊಂದು ಮಠ; ಅಲ್ಲಿ ಸಾಧುಗಳು ವಾಸವಾಗಿದ್ದಾರೆ. ಅವರೆಲ್ಲ ಆ ಮಾತನ್ನು ಕೇಳಿ ಅವಾಕ್ಕಾದರು. ‘‘ಇಲ್ಲಯ್ಯಾ, ಇಲ್ಲಿ ಯಾರು ಹೆಣ್ಣುಮಕ್ಕಳು ವಾಸವಾಗಿಲ್ಲ. ಇಲ್ಲಿ ಸಾಧುಗಳು ಇರುವುದು ನಿನಗೆ ಕಾಣುತ್ತಿಲ್ಲವೆ? – ಇಲ್ಲೇಕೆ ಹೆಂಗಸರು ವಾಸಮಾಡಬೇಕು? ಖಂಡಿತವಾಗಿಯೂ ನಿನಗೇನೋ ತಪ್ಪಾಗಿದೆ.’’

ಅಷ್ಟಾದ ಮೇಲೆ ಕೂಡ ಆ ವ್ಯಕ್ತಿ ಮತ್ತೆ ಮತ್ತೆ ಹೇಳತೊಡಗಿದ, ‘‘ಇಲ್ಲ, ಆ ವೃದ್ಧೆ ನನಗೆ ಹಲವು ಬಾರಿ ಹೇಳಿದ್ದಾರೆ–’’

ಹೀಗೆ ಹೇಳುತ್ತಿದ್ದಂತೆ ಮೆಟ್ಟಿಲ ಬದಿಯಲ್ಲಿದ್ದ ಜಗನ್ಮಾತೆ ಶಾರದಾದೇವಿಯವರ ವಿಭಿನ್ನ ವಯಸ್ಸಿನ ಭಾವಚಿತ್ರದ ಕಡೆಗೆ ಅವನ ಗಮನ ಹರಿಯಿತು. ಒಂದೇ ಫ್ರೇಮ್‌ನಲ್ಲಿ ಕಟ್ಟು ಹಾಕಿಸಿದ್ದ ಆ ಚಿತ್ರವನ್ನು ನೋಡಿ ಅವನು ಹೇಳಿದ– ‘‘ಅಬ್ಬಾ! ಅವರೇ ಅದು! ಈ ವೃದ್ಧ ಮಹಿಳೆಯೇ ನನಗೆ ಸೊಪ್ಪು ತಂದು ಕೊಡಲು ಹೇಳಿದ್ದು! ಅವರು ಇಲ್ಲಿ ವಾಸವಾಗಿಲ್ಲ ಅಂತ ನೀವೆಲ್ಲ ಹೇಳುತ್ತಿದ್ದೀರಿ!’’

ಸಾಧುಗಳೆಲ್ಲ ಮೂಕರಾಗಿ ನಿಂತುಬಿಟ್ಟರು! ಅಮ್ಮಾ, ನಿಮಗೆ ಎರಡು ಕಟ್ಟು ಸೊಪ್ಪು ತಿನ್ನುವ ಬಯಕೆಯಾಗಿದ್ದರೆ, ನಮಗೇಕೆ ಹೇಳಲಿಲ್ಲ?[೨]

---

೧ ಆ ಸಾಧುಗಳು ಸ್ವಾಮಿ ಜ್ಞಾನಾತ್ಮಾನಂದ ಮಹಾರಾಜ್ ಎಂದು ಗಜೇಂದ್ರಕುಮಾರ ಮಿತ್ರರಿಂದ ಕೇಳಿದ್ದೇವೆ. ಸ್ವಾಮಿಜೀಯವರು ಒಂದು ಕಾಲದಲ್ಲಿ (೧೯೫೮–೧೯೬೭) ‘ಉದ್ಬೋಧನ’ದ ಅಧ್ಯಕ್ಷರಾಗಿದ್ದರು. ನಾವು ಇದೇ ಘಟನೆಯನ್ನು ಸ್ವಾಮಿ ಜ್ಞಾನಾತ್ಮಾನಂದರಿಂದ ಕೂಡ ಕೇಳಿದ್ದೇವೆ. ಅವರು ಅಧ್ಯಕ್ಷರಾಗಿದ್ದಾಗಲೇ ಈ ಘಟನೆ ನಡೆಯಿತು ಎಂದು ನಾವು ಕೇಳಿದ್ದೇವೆ. *(–ಸಂ)*

೨ ‘ಸಾಧನಾ ಓ ಜನ್ಮಾಂತರ್’ – ಗಜೇಂದ್ರಕುಮಾರ ಮಿತ್ರ, ಮಿತ್ರ & ಘೋಷ್ ಪಬ್ಲಿಷರ್ಸ್ ಲಿಮಿಟೆಡ್, ಕೊಲ್ಕತ್ತಾ. ೧೯೮೫, ಪು ೬೭–೬೮.